# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

**ತರಗತಿ - 9**

State Council of Educational and Research and Training (SCERT), Kerala.

## ಕಲಿಕೆಗಾಗಿ ಹೊಸಹಾದಿ ತೆರೆಯೋಣ

## ಮುನ್ನಡೆಯುವ

### ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.

**ನಿರ್ದೇಶಕರು,**

**SCERT, ಕೇರಳ**

ಅಧ್ಯಾಪಕ ಬಂಧುಗಳೆ / ವಿದ್ಯಾರ್ಥಿಗಳೆ,

ಕೋವಿಡ್ ಮಹಾಮಾರಿ ತನ್ನ ಕಬಂಧ ಬಾಹುಗಳನ್ನು ಜಗತ್ತಿನ ಪ್ರತಿಯೊಂದರ ಮೇಲೆಯೂ ಚಾಚಿ ತನ್ನ ಗಾಢ ಪರಿಣಾಮವನ್ನು ಬೀರಿತು. ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ, ಕಲಿಕೆಯ ಸಾಮರ್ಥ್ಯ ಮತ್ತು ಏಕಾಗ್ರತೆಯ ಕುಸಿತಕ್ಕೂ ಇದು ಕಾರಣವಾಯಿತು.

ಆದುದರಿಂದ ಕೇರಳದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಮತ್ತು ಕಲಿಕೆಯ ಸಾಮರ್ಥ್ಯದ ನೈಜ ವಿಚಾರಗಳನ್ನು ತಿಳಿಯಲು 2022-23 ಅಧ್ಯಯನ ವರ್ಷದ ವಿದ್ಯಾರ್ಥಿಗಳ ಕಾಲುವಾರ್ಷಿಕ ಮೌಲ್ಯಮಾಪನದ ಉತ್ತರ ಪತ್ರಿಕೆಗಳ ವೈಜ್ಞಾನಿಕ ವಿಶ್ಲೇಷಣೆ ನಡೆಸಲು SCERT ನೇತೃತ್ವದಲ್ಲಿ ತೀರ್ಮಾನಿಸಲಾಗಿದೆ.

ವಿದ್ಯಾರ್ಥಿಗಳ ಆಲಸ್ಯವನ್ನು ದೂರಮಾಡಿ, ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿ ಅವರ ಮಸುಕಾದ ಜ್ಞಾನವನ್ನು ಪ್ರಜ್ವಲಿಸುವಂತೆ ಮಾಡುವ ಜವಾಬ್ದಾರಿ ಅಧ್ಯಾಪಕರಾದ ನಮ್ಮ ಮೇಲಿದೆ. ಅದಕ್ಕಾಗಿ ತರಗತಿಯಲ್ಲಿ ಕ್ರಿಯಾತ್ಮಕವಾದ ಬೋಧನೆ–ಕಲಿಕೆಯ ಚಟುವಟಿಕೆಗಳನ್ನು ಆವಿಷ್ಕರಿಸಲು ಮತ್ತು ಸಮರ್ಪಣಾ ಭಾವದಿಂದ ಅವುಗಳನ್ನು ಅನುಷ್ಠಾನಗೊಳಿಸಲು ನಾವು ಸಿದ್ಧರಾಗೋಣ ಎಂದು ಹಾರೈಸೋಣ.

**9 ನೇ ತರಗತಿಯ ಮೌಲ್ಯಮಾಪನ ವಿಶ್ಲೇಷಣೆಗೆ ಒಳಪಡಿಸಿದ ಕನ್ನಡ ಉತ್ತರ ಪತ್ರಿಕೆಗಳು-51**

| | | |
|---|---|---|
| A+ ಗ್ರೇಡ್ ಲಭಿಸಿದವರು | = 7 | 3.72% |
| A ಗ್ರೇಡ್ ಲಭಿಸಿದವರು | = 8 | 15.68% |
| B+ ಗ್ರೇಡ್ ಲಭಿಸಿದವರು | = 4 | 7.84% |
| B ಗ್ರೇಡ್ ಲಭಿಸಿದವರು | = 3 | 5.88% |
| C+ ಗ್ರೇಡ್ ಲಭಿಸಿದವರು | = 5 | 9.80% |
| C ಗ್ರೇಡ್ ಲಭಿಸಿದವರು | = -- | ------ |
| D+ ಗ್ರೇಡ್ ಲಭಿಸಿದವರು | = 3 | 5.88% |
| BELOW | = 21 | 41.17% |

# ತರಗತಿ : 9

# ಪತ್ರಿಕೆ - ಕನ್ನಡ AT

**1 ರಿಂದ 7 ರ ವರೆಗಿನ ಪ್ರಶ್ನೆಗಳು:**

**ಭಾಷಾಪರವಾದ ದೋಷಗಳು:**1 ಮತ್ತು 2 ನೆಯ ಪ್ರಶ್ನೆ

- ಮಗುವಿನ ಜ್ಞಾನ, ಜ್ಞಾಪಕ ಶಕ್ತಿ (ಜೊತೆಗೆ ಚಿಂತನೆ)ಗಳನ್ನು ತಿಳಿಯುವುದರಿಂದ ಹಾಗೂ ಬಹು ಆಯ್ಕೆಯ ಪ್ರಶ್ನೆಗಳಾದುದರಿಂದ ಭಾಷಾಪರವಾದ ದೋಷಗಳು ಕಂಡುಬರುವುದಿಲ್ಲ.

**ಪ್ರಶ್ನೆ3 ರಿಂದ 7**

**ವ್ಯಾಕರಣ ದೋಷಗಳು:**

- ನಾಮಪದಗಳ ಭಾವನಾಮಗಳನ್ನು ಬರೆಯುವಾಗ ಬಹುಮಂದಿಯ ಉತ್ತರಗಳಲ್ಲಿ ತಪ್ಪುಗಳು ಕಂಡುಬಂದಿವೆ.
- 6 ನೆಯ ಪ್ರಶ್ನೆಯು ಸ್ವತಂತ್ರ ವಾಕ್ಯರಚನೆಯಾಗಿರುತ್ತದೆ. ಇಲ್ಲಿ ವಿಭಕ್ತಿ ಪ್ರತ್ಯಯದ ಬಳಕೆ, ಮತ್ತು ಕೊಟ್ಟಿರುವ ಪದದ ಅರ್ಥೈಸುವಿಕೆ ನಡೆಯದಿರುವುದರಿಂದ ವಾಕ್ಯರಚನೆಯು ಅರ್ಥ ಪೂರ್ಣವಾದ ವಾಕ್ಯವಾಗಿರುವುದಿಲ್ಲ.

**ಪ್ರಶ್ನೆ-5**

**ಘೋಷಣಾ ವಾಕ್ಯ ರಚನೆ.**

- ಕೊಟ್ಟಿರುವ ಸೂಚನೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದಿರುವುದು ಕಂಡು ಬರುತ್ತದೆ.
- ಪೂರ್ಣ ಪ್ರಮಾಣದ ಆಶಯ ಗ್ರಹಣ ನಡೆಯದಿರುವುದು.
- ಘೋಷಣಾ ವಾಕ್ಯದ ಸ್ವರೂಪ ತಿಳಿಯದಿರುವುದು.
- ಸಾಕಷ್ಟು ಪದಸಂಪತ್ತಿನ ಕೊರತೆ.

**ಪ್ರಶ್ನೆ 7-**

**ಶೀರ್ಷಿಕೆ ಬರೆಯುವುದು.**

ಆಶಯ ಗ್ರಹಣ, ಸ್ವತಂತ್ರ ಚಿಂತನೆ, ನಿಗಮನಗಳ ಕೊರತೆಯನ್ನು ಕಾಣಬಹುದು.

**ಪ್ರಶ್ನೆ ಸಂಖ್ಯೆ-8 ರಿಂದ 13**

**ಪ್ರಶ್ನೆ 8-**

**ಸ್ವಾರಸ್ಯ**

**ಭಾಷಾ ಪರವಾದ ಅಂಶಗಳು**:

ಅಕ್ಷರ ತಪ್ಪುಗಳು, ಹ್ರಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣ, ಒತ್ತಕ್ಷರಗಳ ಕುರಿತು ಸ್ಪಷ್ಟವಾದ ತಿಳುವಳಿಕೆಯ ಕೊರತೆಯನ್ನು ಕಾಣಬಹುದು.

**ವ್ಯಾಕರಣ ಅಂಶಗಳು:** ವಚನ, ಲಿಂಗ, ವಿಭಕ್ತಿ ಪ್ರತ್ಯಯಗಳ ತಿಳುವಳಿಕೆಯ ಕೊರತೆ.

**ವ್ಯವಹಾರ ರೂಪ:**

- ಸ್ವಾರಸ್ಯ ಬರಹದ ಸ್ವರೂಪದ ತಿಳುವಳಿಕೆಯ ಕೊರತೆ(ಪದ-ಪದಸಮೂಹದ ವಿಶೇಷ ಅರ್ಥ ತಿಳಿಯದಿರುವುದು. ಅವುಗಳ ಒಳಾರ್ಥಗಳ ಆಶಯ ಗ್ರಹಣ ನಡೆಯದಿರುವುದು.)
- ಕವಿ, ಕವಿತೆಯ ಹೆಸರು ನಮೂದಿಸದಿರುವುದು ಇತ್ಯಾದಿ ಕೊರತೆಗಳನ್ನು ಕಾಣಬಹುದು.
- ಹಾಗೆಯೇ ವಿದ್ಯಾರ್ಥಿಗಳಲ್ಲಿ ಪದಸಂಪತ್ತಿನ ಕೊರತೆ ಬಹಳಷ್ಟಿದೆ.

**ಆಸ್ವಾದನೀಯ ಅಂಶಗಳು:**

- ಕವಿತೆಯ ಪದ, ಪದಸಮೂಹದ ವಿಶೇಷ ಅರ್ಥಗಳನ್ನು ತಿಳಿದುಕೊಳ್ಳದಿರುವುದು.
- ವಿಶೇಷ ಪದ –ಪದ ಸಮೂಹಗಳ ಪ್ರಯೋಗದಲ್ಲಿನ ವಿಶೇಷತೆಗಳ ತಿಳುವಳಿಕೆಯ ಕೊರತೆ.

**ಪ್ರಶ್ನೆ-9**

**ಪಾತ್ರ ಚಿತ್ರಣ**

**ವ್ಯಾಕರಣ ದೋಷ:** ಮನೆ ಬಳಕೆಯ ಪದ ಪ್ರಯೋಗವು ಮಗುವಿನ ಕನ್ನಡ ಪದಸಂಪತ್ತಿನ ಕೊರತೆಯನ್ನು ಸೂಚಿಸುತ್ತದೆ. ಇಲ್ಲಿಯೂ ಇತರ ಭಾಷಾ ದೋಷಗಳು ಸಾಧಾರಣವಾಗಿ ಕಂಡು ಬರುತ್ತವೆ.

**ವ್ಯವಹಾರ ರೂಪ:**

- ಪಾತ್ರ ಚಿತ್ರಣದ ಸ್ವರೂಪದ ಮಾಹಿತಿಯ ಕೊರತೆಯಿದೆ.(ಉದಾ:ಪಾತ್ರದ ಗುಣ, ಸ್ವಭಾವದ ವಿಶ್ಲೇಷಣೆ, ನಿಗಮನ-ನಿಗಮನಕ್ಕೆ ಪೂರಕವಾದ ಸಮರ್ಥನೆ.)
- ಮಗುವಿನಲ್ಲಿ ಆಶಯ ಗ್ರಹಣ ನಡೆದಿರುವುದು ಕಂಡುಬರುತ್ತದೆ. ಆದರೆ ಅದನ್ನು ಲಿಖಿತವಾಗಿ ಅಭಿವ್ಯಕ್ತ ಪಡಿಸಲು ಸೂಕ್ತವಾದ ಭಾಷಾ ಸಾಮರ್ಥ್ಯ ಇಲ್ಲದಿರುವುದು ಕಂಡುಬರುತ್ತದೆ.

**ಪ್ರಶ್ನೆ-10**

**ವಿಶ್ಲೇಷಣಾ ಟಿಪ್ಪಣಿ**

ಉತ್ತರ ಪತ್ರಿಕೆಗಳ ಅವಲೋಕನವನ್ನು ಮಾಡಿದಾಗ ಹೆಚ್ಚಿನವುಗಳಲ್ಲಿ ಭಾಷಾಪರವಾದ ಮತ್ತು ವ್ಯಾಕರಣ ದೋಷಗಳು ಕಂಡುಬರುತ್ತವೆ.

ವಿಶ್ಲೇಷಣಾ ಟಿಪ್ಪಣಿ ಬರೆಯಬೇಕಾದರೆ ವಿದ್ಯಾರ್ಥಿಗೆ ವಿಷಯದ ಸರಿಯಾದ ಆಶಯ ಗ್ರಹಣವಾಗಿರಬೇಕು. ಅಂತೆಯೇ ವಿದ್ಯಾರ್ಥಿಯ ನಿಗಮನವಿರಬೇಕು. ನಿಗಮನಕ್ಕೆ ಬರಬೇಕಾದರೆ ಸ್ವತಂತ್ರ ಚಿಂತನೆ ಅನಿವಾರ್ಯ. ಇದಕ್ಕೆ ಸ್ವತಂತ್ರ ಓದು ಅನಿವಾರ್ಯ. (ಆಕರ ಗ್ರಂಥ, ಪತ್ರಿಕೆ, ಮ್ಯಾಗಜಿನ್ ಗಳು-----ಇತ್ಯಾದಿ) ಹೆಚ್ಚಿನ ವಿದ್ಯಾರ್ಥಿಗಳು ಈ ಪ್ರಶ್ನೆಗೆ ಉತ್ತರಿಸಲಿಲ್ಲ. ವಿದ್ಯಾರ್ಥಿಗಳಿಗೆ ಪ್ರಶ್ನೆಗಳಲ್ಲಿ ಆಯ್ಕೆ ಇರುವುದರಿಂದ ಮತ್ತು ಈ ಪ್ರಶ್ನೆ ಕ್ಲಿಷ್ಟ ಎನ್ನುವ ಕಾರಣದಿಂದ ಇದನ್ನು ಬಿಟ್ಟಿರಬಹುದು.

**ಪ್ರಶ್ನೆ-11**

**ಆಶಯ ಬರವಣಿಗೆ.**

ಈ ಮೊದಲಿನಂತೆ ಭಾಷಾಪರವಾದ, ವ್ಯಾಕರಣ ಪರವಾದ ಕೊರತೆಗಳಿವೆ. ಲಿಖಿತವಾಗಿ ಬರೆಯಲು ಸಾಧ್ಯವಿರುವ ಹೆಚ್ಚಿನ ವಿದ್ಯಾರ್ಥಿಗಳು ಈ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಬರೆದಿರುವ ವಿದ್ಯಾರ್ಥಿಗಳಿಗೆ ಆಶಯ ಗ್ರಹಣವಾಗಿರುತ್ತದೆ.

**ಪ್ರಶ್ನೆ12**

**ಸಂಭಾಷಣೆ**

- ವಾಕ್ಯಗಳಲ್ಲಿ ವ್ಯಾಕರಣ ಮತ್ತು ಭಾಷಾ ದೋಷಗಳಿವೆ.
- ಸೂಚನೆಗೆ ಅನುಸರಿಸಿ ಸೂಕ್ತವಾದ ಸಂಭಾಷಣೆಗಳನ್ನು ಲಿಖಿತವಾಗಿ ಬರೆಯಲು ಸಾಧ್ಯವಿರುವ ವಿದ್ಯಾರ್ಥಿಗಳು ಬರೆದಿರುತ್ತಾರೆ.

**ಪ್ರಶ್ನೆ13**

**ಸ್ವತಂತ್ರ ಬರವಣಿಗೆ ಮತ್ತು ನಿಗಮನ.**

ಬರವಣಿಗೆಗಳಲ್ಲಿ ಭಾಷಾ ಮತ್ತು ವ್ಯಾಕರಣ ದೋಷಗಳಿವೆ. A ಗ್ರೇಡ್ ಪಡೆದ ವಿದ್ಯಾರ್ಥಿಗಳ ಉತ್ತರಗಳಲ್ಲಿ ಪಠ್ಯದಲ್ಲಿನ ವಿಚಾರಗಳ ಆಶಯಗ್ರಹಣ ನಡೆದಿದೆ ಎನ್ನುವುದನ್ನು ತೋರಿಸುತ್ತದೆ. ಆಶಯಗ್ರಹಣವಾದ ವಿದ್ಯಾರ್ಥಿಗಳು ನಿಗಮನಕ್ಕೆ ಬಂದಿರುವುದು ಕಂಡು ಬರುತ್ತದೆ.

**ಪ್ರಶ್ನೆ-14, 15, 16**

**ಪಾಠ ಭಾಗದ ಆಧಾರದಲ್ಲಿ ಸ್ವತಂತ್ರ ರಚನೆ.**

A+ ಪಡೆದಿರುವ ವಿದ್ಯಾರ್ಥಿಗಳಲ್ಲಿಯೂ ಬರವಣಿಗೆಯ ಸಾಮರ್ಥ್ಯದ ಕೊರತೆಯನ್ನು ಕಾಣಬಹುದು.

- ಪಠ್ಯದ ಪ್ರಧಾನ ಆಶಯಗಳು ಮನವರಿಕೆಯಾಗಿದ್ದರೂ ಅವುಗಳನ್ನು ಬರವಣಿಗೆಯ ಮೂಲಕ ಪ್ರಕಟ ಪಡಿಸಲು ಬೇಕಾದ ಸಾಮರ್ಥ್ಯದ ಕೊರತೆಯಿದೆ, ಪದಸಂಪತ್ತಿನ ಕೊರತೆಯಿದೆ.
- ಭಾಷಾಪರವಾದ, ವ್ಯಾಕರಣ ಪರವಾದ ಕೊರತೆಗಳಿವೆ.
- ಗ್ರಾಮೀಣ ಮನೆಬಳಕೆಯ  ಪದ ಪ್ರಯೋಗಗಳಿವೆ.
- ತರಗತಿಗಳಲ್ಲಿ ಬರವಣಿಗೆ, ಓದು, ತಿದ್ದುವಿಕೆ ಮೊದಲಾದ ಪ್ರಕ್ರಿಯೆಗಳ ಕೊರತೆಗಳು ಕಾರಣವಾಗಿರಬಹುದು.

ವಿದ್ಯಾರ್ಥಿಗಳಲ್ಲಿ ಕಲಿಕಾ ಗುಣಮಟ್ಟವನ್ನು ಕಾಯ್ದುಕೊಂಡು ಅವರಲ್ಲಿ ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಸೃಜನಶೀಲತೆಯನ್ನು ಬೆಳೆಸುವುದು ಭಾಷಾ ಸಂಬಂಧಿತವಾದ ಕಲಿಕೆಯಲ್ಲಿ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತಕ್ಕೆ ತಲುಪುವಾಗ ಭಾಷಾ ಕಲಿಕೆಯ ಮೂಲಕ ಆ ಭಾಷೆಯನ್ನು ಸುಲಲಿತವಾಗಿ ಬಳಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಭಾಷೆಯ ವಿಶೇಷತೆ, ವ್ಯಾಕರಣ, ವ್ಯವಹಾರ ರೂಪಗಳು, ಆಶಯ, ಸ್ವರೂಪ, ಆಸ್ವಾದನೆ ಇತ್ಯಾದಿಗಳನ್ನು ಸ್ಪಷ್ಟವಾಗಿ ತಿಳಿಯುವಂತಾಗಬೇಕು. ಅಕ್ಷರಗಳನ್ನು ತಪ್ಪಿಲ್ಲದಂತೆ ಬರೆಯುವ, ಉಚಿತವಾದ ವಾಕ್ಯ ರಚನೆಯನ್ನು ಮಾಡುವ, ಶಬ್ದ ಭಂಡಾರವನ್ನು ಬಳಸಿಕೊಳ್ಳುವ ಭಾಷಿಕ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು.

ಪ್ರೌಢಶಾಲಾ ಹಂತದಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳು ಸಾಹಿತ್ಯ ರೂಪಗಳನ್ನು ಸ್ವತಂತ್ರವಾಗಿ ಓದಿ, ಅರ್ಥೈಸಿಕೊಂಡು ಅದರ ಆಶಯವನ್ನು ಗ್ರಹಿಸಿ, ಮೌಖಿಕವಾಗಿ ಮತ್ತು ಲಿಖಿತವಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗಬೇಕು. ವಿವಿಧ ವ್ಯವಹಾರ ರೂಪಗಳನ್ನು ಸಮರ್ಥವಾಗಿ ಸಂದರ್ಭೋಚಿತವಾಗಿ ಬಳಸಿಕೊಳ್ಳುವುದಕ್ಕೆ ಪ್ರಾಪ್ತರಾಗಬೇಕು. ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು, ನಿಗಮನಗಳನ್ನು, ಚಿಂತನೆಗಳನ್ನು ವಿವಿಧ ಭಾಷಾ ವ್ಯವಹಾರ ರೂಪಗಳಲ್ಲಿ ಸೃಜನಾತ್ಮಕವಾಗಿ ಅಭಿವ್ಯಕ್ತಗೊಳಿಸಲು ಸಮರ್ಥರಾಗಬೇಕು.

ಕಳೆದೆರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಕಲಿಕಾ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ, ಪ್ರಸ್ತುತ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ತರಗತಿಯ ಕಲಿಕಾ ಮಟ್ಟವನ್ನು ತಲುಪಲು ವಿಫಲರಾಗಿರುವುದು ಗೋಚರವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಕಲಿಕಾ ಅಂತರ ಮತ್ತು ಕಲಿಕಾ ಗುಣಮಟ್ಟದ ಕುಸಿತ, ಭಾಷೆಯ ಬಳಕೆಯಲ್ಲಿ ಅಸಮರ್ಪಕತೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಂಟು, ಒಂಬತ್ತು, ಮತ್ತು ಹತ್ತನೇ ತರಗತಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವ

ವಿದ್ಯಾರ್ಥಿಗಳಲ್ಲಿ ಭಾಷಾ ಕಲಿಕೆಯಲ್ಲಿ ಉಂಟಾದ ಕಲಿಕಾ ಗುಣಮಟ್ಟದ ಕುಸಿತ ಮತ್ತು ದೋಷಗಳಿಗೆ ಕಾರಣಗಳನ್ನು ಕಂಡುಕೊಂಡು ಅದಕ್ಕೆ ಪರಿಹಾರವನ್ನು ಕಾಣುವ ಅನಿವಾರ್ಯತೆ ಎದುರಾಯಿತು.

ಈ ತರಗತಿಗಳಲ್ಲಿ ಕನ್ನಡ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ಭಾಷಾ ಕಲಿಕೆಯ ಗುಣಮಟ್ಟದ ಕೊರತೆ ಮತ್ತು ಭಾಷಿಕ ದೋಷಗಳನ್ನು ಕಂಡುಕೊಳ್ಳಲು ಸೂಚಿತ ತರಗತಿಗಳ ಕಾಲು ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ತರಗತಿವಾರು ವಿಶ್ಲೇಷಣೆಗೆ ಒಳಪಡಿಸಲಾಯಿತು. ವಿಶ್ಲೇಷಣೆ ನಡೆಸುವಾಗ ಗ್ರೇಡ್ ವಾರು ಮತ್ತು ಪ್ರಶ್ನಾನುಸಾರವಾಗಿ ಗಮನಿಸಲಾಗಿದೆ. ವಿಶ್ಲೇಷಣೆಯಲ್ಲಿ ಈ ಕೆಳಗಿನ ಅಂಶಗಳನ್ನು ಕಂಡುಕೊಳ್ಳಲಾಯಿತು.

- ಭಾವನಾಮ ಪದಗಳ ಬಗ್ಗೆ ವಿದ್ಯಾರ್ಥಿಗೆ ತಿಳಿಯದಿರುವುದು.
- ವಿಭಕ್ತಿ ಪ್ರತ್ಯಯ ಬಳಕೆ ಮತ್ತು ವಾಕ್ಯ ರಚನೆಯ ಸಂದರ್ಭದಲ್ಲಿ ಪದವನ್ನು ಅರ್ಥೈಸಲು ಸಾಧ್ಯವಾಗದಿರುವುದು.
- ಕೊಟ್ಟಿರುವ ವಿಷಯದ ಆಶಯವನ್ನು ಗ್ರಹಿಸಿಕೊಂಡು ಘೋಷಣಾ ವಾಕ್ಯವನ್ನು ರಚಿಸುವಲ್ಲಿ ವಿಫಲವಾಗಿರುವುದು, ಘೋಷಣಾ ವಾಕ್ಯದ ಸ್ವರೂಪ ತಿಳಿಯದಿರುವುದು.
- ಪದ ಭಂಡಾರದ ಕೊರತೆ.
- ಸೂಚಿತ ಲೇಖನ ಭಾಗದ ಆಶಯ ಗ್ರಹಣ, ಸ್ವತಂತ್ರ ಚಿಂತನೆ, ನಿಗಮನಗಳಿಗೆ ಬರಲು ಸಾಧ್ಯವಾಗದಿರುವುದು.
- ಹ್ರಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣ, ಒತ್ತಕ್ಷರಗಳು ಕುರಿತಾದ ಸ್ಪಷ್ಟ ತಿಳುವಳಿಕೆ ಇಲ್ಲದಿರುವುದು.
- ವಚನ, ಲಿಂಗ, ವಿಭಕ್ತಿ ಪ್ರತ್ಯಯಗಳನ್ನು ತಿಳಿದುಕೊಳ್ಳದಿರುವುದು.
- ವ್ಯವಹಾರ ರೂಪಗಳ ಸ್ವರೂಪ ತಿಳಿದುಕೊಳ್ಳದಿರುವುದು.
- ಆಸ್ವಾದನಾ ಟಿಪ್ಪಣಿ, ಪಾತ್ರ ಚಿತ್ರಣದಂತಹ ಪ್ರಶ್ನೆಗಳಲ್ಲಿ ವಿದ್ಯಾರ್ಥಿಗಳಲ್ಲಿ ಆಶಯ ಗ್ರಹಣ ನಡೆಯದಿರುವುದು.
- ಪಠ್ಯದ ಆಶಯ ಅರ್ಥವಾಗಿದ್ದರೂ ಅವುಗಳನ್ನು ಬರವಣಿಗೆ ಮೂಲಕ ಪ್ರಸ್ತುತಪಡಿಸಲು ಬೇಕಾದ ಬರವಣಿಗೆಯ ಸಾಮರ್ಥ್ಯದ ಕೊರತೆ.
- ಗ್ರಾಮೀಣ, ಆಡು ಮಾತಿನ ಪದ ಬಳಕೆ, ಕಂಡು ಬರುತ್ತಿದ್ದು ವಿದ್ಯಾರ್ಥಿಯು ಬರವಣಿಗೆ, ಓದಿಗೆ ಗಮನಹರಿಸದಿರುವುದು.

ಮುಂತಾದವುಗಳನ್ನು ಗುರುತಿಸುವಲ್ಲಿ ವಿದ್ಯಾರ್ಥಿಗಳು ವಿಫಲವಾಗಿರುವುದು.

ಒಂಬತ್ತನೇ ತರಗತಿಯ ವಿದ್ಯಾರ್ಥಿಗಳ ಭಾಷಾ ಪತ್ರಿಕೆಗಳನ್ನು ಗಮನಿಸಿದಾಗ ಶೇಕಡ 50 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು, ವಿಶ್ಲೇಷಣೆಗೆ ಅಳವಡಿಸಿಕೊಂಡ ನಾಲ್ಕು ಮಾನದಂಡಗಳಲ್ಲಿಯೂ ಹಿಂದುಳಿದಿರುವುದನ್ನು ಕಾಣಬಹುದು.

ಭಾಷಾ ಪ್ರಯೋಗದಲ್ಲಿನ ದೋಷಗಳು, ವ್ಯಾಕರಣ ದೋಷಗಳು, ಬರವಣಿಗೆ, ಓದುವ ದೋಷಗಳನ್ನು ಪರಿಹರಿಸಲು ತರಗತಿಗಳಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಪಠ್ಯಕ್ಕೆ ಪೂರಕವಾಗಿ ಮತ್ತು ಮುಂದುವರಿದ ಚಟುವಟಿಕೆಗಳಾಗಿ ನಡೆಸುವುದು ಸೂಕ್ತ.

ಚಟುವಟಿಕೆಗಳು ಹೀಗೂ ಮಾಡಬಹುದು.

| ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|
| 1.ಎಲ್ಲಾ ಮಕ್ಕಳಿಗೂ ಸರಳ ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.<br>2.ಕನ್ನಡ ಭಾಷೆಯಲ್ಲಿ ಓದಲು ಬರೆಯಲು ವ್ಯವಹರಿಸಲು ಸಾಧ್ಯವಾಗಬೇಕು. | • ಪುಸ್ತಕಗಳನ್ನು ಸಂಗ್ರಹಿಸುವುದು<br>• ಆಸ್ವಾದನೆ<br>• ಓದುವಿಕೆ<br>• ಬರವಣಿಗೆ<br>• ಸ್ಪರ್ಧೆಗಳು | ಜುಲೈ<br>ಆಗಸ್ಟ್<br>ಸೆಪ್ಟಂಬರ್&<br>ಒಕ್ಟೋಬರ್<br>ನವಂಬರ್<br>ಜನವರಿ & ಫೆಬ್ರವರಿ | ಕನ್ನಡ ಭಾಷಾ ಅಧ್ಯಾಪಕರು/ ತರಗತಿಯಲ್ಲಿರುವ ವಿದ್ಯಾರ್ಥಿಗಳ ಹೆತ್ತವರು |

<u>ಉತ್ತಮ ಓದು</u>

ಉದ್ದೇಶ :- ಎಲ್ಲಾಮಕ್ಕಳಿಗೂ ಸರಳ ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.

<u>ಚಟುವಟಿಕೆಗಳು:-</u>

ಆಯ್ಕೆ ಮಾಡಿದ ಸರಳವಾದ

105 ಪುಸ್ತಕಗಳು

30 ಕನ್ನಡ ಕಥೆ ಪುಸ್ತಕ

20 ಕನ್ನಡ ಚಿತ್ರಕಥೆ ಪುಸ್ತಕ

15 ಕನ್ನಡ ಪದ್ಯ ಚುಟುಕು ಪುಸ್ತಕ

30 ಆತ್ಮಕಥೆ, ಜೀವನ ಚರಿತ್ರೆ, ಪ್ರವಾಸ ಕಥನ, ಕಥನ ಕವನ, ದಿನಚರಿ, ಪತ್ರ, ಪ್ರಬಂಧ, ನಾಟಕ ಇತ್ಯಾದಿ

5 ರಸಪ್ರಶ್ನೆ ಪುಸ್ತಕ

ಸಂಗ್ರಹಿಸುವುದು ಹೇಗೆ?

- ಒಂದೊಂದು ಪುಸ್ತಕ ಪ್ರತಿ ಮಗುವಿನಿಂದ, ಅಧ್ಯಾಪಕರಿಂದ ಹೆತ್ತವರಿಂದ, ಹಳೆ ವಿದ್ಯಾರ್ಥಿಗಳಿಂದ, ಹಿತೈಷಿಗಳಿಂದ, ಮನೆ ಸಂದರ್ಶನ ಮೂಲಕ.
- ಬೇರೆ ಯಾವುದಾದರೂ ಪ್ರಾಯೋಜಕತ್ವದಲ್ಲಿ ಪುಸ್ತಕ ಖರೀದಿಸುವುದು.

ಚಟುವಟಿಕೆ :-(ಆಲಿಸುವಿಕೆ ,ಮಾತನಾಡುವಿಕೆ, ಓದುವಿಕೆ L,S&R)

ಕನ್ನಡ ಪಿರೇಡ್ ಗಳಲ್ಲಿ ಮೊದಲ ಐದು ನಿಮಿಷ ಒಂದು ಮಗುವಿನಿಂದ ಗಟ್ಟಿಯಾಗಿ ಒಂದು ಪುಟ ಓದಿಸುವುದು. ಓದಿದ ಪುಸ್ತಕಗಳ ಹೆಸರು ಬರೆದಿಡಲು ಒಂದು ಪುಸ್ತಕ ಬೇಕು. ತರಗತಿಯ ಓದುವ ಮೂಲೆಯಲ್ಲಿ ಸಾಕಷ್ಟು ಪುಸ್ತಕಗಳನ್ನು ಒದಗಿಸುವುದು. ಹೆಚ್ಚು ಪುಸ್ತಕಗಳನ್ನು ಓದಿದ ವಿದ್ಯಾರ್ಥಿ/ ವಿದ್ಯಾರ್ಥಿನಿಗೆ ಬಹುಮಾನ ನೀಡುವುದು.

ಉತ್ತಮ ಬರವಣಿಗೆ

ಉದ್ದೇಶ: ಎಲ್ಲ ಮಕ್ಕಳು ಪದ ವಾಕ್ಯಗಳನ್ನು ಬರೆಯಲು ಸಾಧ್ಯವಾಗಬೇಕು.

ವೈವಿಧ್ಯಪೂರ್ಣವಾದ ಬರವಣಿಗೆ ಚಟುವಟಿಕೆಗಳು.

ಉದಾ:

- ಕಥೆ, ಕವನ, ಪ್ರಬಂಧ, ದಿನಚರಿ, ಲೇಖನ ಇತ್ಯಾದಿ
- ತರಗತಿ ಸಂಚಿಕೆ ತಯಾರಿ
- ಭಿತ್ತಿಪತ್ರಿಕೆ ತಯಾರಿ
- ಓದುವ ಕಾರ್ಡ್ ತಯಾರಿ
- ಮಾದರಿಕೊಟ್ಟು ಸ್ಪರ್ಧೆ ನಡೆಸಿ ಉತ್ತಮವಾದುದನ್ನು ಕಂಡುಹಿಡಿದು ಸರಿಪಡಿಸಿ ಏ 4 ಶೀಟ್ ಕೊಟ್ಟು ಚಂದವಾಗಿ ಬರೆದು ಚಿತ್ರ ಬಿಡಿಸಿ, ಬಣ್ಣ ಹಚ್ಚಿ ಲ್ಯಾಮಿನೇಷನ್ ಮಾಡಿ ಓದುವ ಕಾರ್ಡ್ ತಯಾರಿಸುವುದು.
- ವೈಯಕ್ತಿಕವಾಗಿ 'ನನ್ನ ಪುಸ್ತಕ' ತಯಾರಿ. (ಕಥೆ, ಕವನ, ಚುಟುಕು, ಪ್ರಬಂಧ ಇತ್ಯಾದಿಗಳ ಸಂಗ್ರಹ)

ಪ್ರತಿಭಾವಂತರಿಗೆ

- ಹಾಡನ್ನು ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಆಯ್ಕೆ ಮಾಡಿ ಇತರ ಮಕ್ಕಳ ಮುಂದೆ ಅವರ ಪ್ರತಿಭೆಯನ್ನು ಪ್ರಕಟಪಡಿಸಿ ಅವರಿಗೆ ಕೇಳಲೂ, ಆಸ್ವಾದಿಸಲೂ ಅವಕಾಶ ಲಭಿಸುವಂತೆ ಎರಡು ವಾರಕ್ಕೊಮ್ಮೆ ಸಾಹಿತ್ಯ/ ಬಾಲಸಭೆ ಸೇರುವುದು.
- ಮೊದಲೇ ಯೋಜನೆ ಮಾಡಬೇಕು.

- ಒಮ್ಮೆ ಹಾಡಿದ /ಹೇಳಿದ ಮಕ್ಕಳನ್ನು ಸಭೆಗೆ ಕೇಳುಗರಾಗಿಸಬೇಕು. ಮೊದಲ ಸಭೆಯಲ್ಲಿ ಕೇಳುಗರಾದವರು ನಂತರದ ಸಭೆಗೆ ಹಾಡುವವರಾಗಬೇಕು.
- ಇದೇ ರೀತಿ ಸೃಜನಶೀಲ ಹವ್ಯಾಸಗಳನ್ನು ಪ್ರೋತ್ಸಾಹಿಸುವುದು.
- ಪ್ರೊಜೆಕ್ಟರ್ ಉಪಯೋಗಿಸಿ 10 ಕಥೆಗಳು/ ಪದ್ಯ/ ತಮಾಷೆ ಚಿತ್ರಗಳ ವಿಡಿಯೋ ತೋರಿಸಬೇಕು.

  ಉದಾ:- ತೆನಾಲಿ ರಾಮನ ಕಥೆಗಳು, ಪಂಚತಂತ್ರ ಕಥೆಗಳು.
- ಅವುಗಳನ್ನು ಸ್ವತಂತ್ರವಾಗಿ ಅಭಿನಯಿಸಲು ಪ್ರೋತ್ಸಾಹಿಸುವುದು.

ಉತ್ತಮ ಕಲಿಕೆಗೆ ಏನೇನು?

- ರಸಪ್ರಶ್ನೆ
- ಪದ ತಯಾರಿ
- ಪಾತ್ರಾಭಿನಯ
- ಕಥೆ ಪೂರ್ತಿಗೊಳಿಸುವುದು / ಕಥಾ ರಚನೆ
- ಪದ್ಯ ಪೂರ್ತಿಗೊಳಿಸುವುದು / ಪದ್ಯ ರಚನೆ
- ಪದಬಂಧ
- ನೆನಪು ಶಕ್ತಿ ಪರೀಕ್ಷೆ
- ಬಣ್ಣ ಹಚ್ಚುವುದು
- ಪದ್ಯ ಹಾಡುವುದು / ಕಂಠಪಾಠ
- ಅಭಿನಯ ಗೀತೆ
- ಕಥೆ ಹೇಳುವುದು / ಕಥೆ ಓದಿ ಚಿತ್ರರಚನೆ
- ಕಾವ್ಯ ಪಾರಾಯಣ
- ಪದಬಂಡಿ / ಪದ್ಯಬಂಡಿ / ವಾಕ್ಯ ಬಂಡಿ
- ಒಗಟುಗಳು / ಒಗಟು ರಚನೆ
- ಸಂಭಾಷಣೆ / ಸಂಭಾಷಣೆ ರಚನೆ
- ನೃತ್ಯ
- ಪ್ರೊಜೆಕ್ಟರ್ ಮೂಲಕ ತೆನಾಲಿ ರಾಮನ ಕಥೆಗಳನ್ನು ತೋರಿಸುವುದು
- ಬೀರಬಲ್ ಕಥೆಗಳು ಮತ್ತು ಇತರ ಕಥೆಗಳು
- ಉತ್ತಮವಾದ ಪದ್ಯಗಳನ್ನು ಕೇಳಿಸುವುದು.

1. <u>ಆಲಿಸುವಿಕೆ ಸ್ಪರ್ಧೆ</u>:-

- ಪ್ರೊಜೆಕ್ಟರ್ ನಲ್ಲಿ ಒಂದು ಕಥೆ ತೋರಿಸುವುದು / ಕಥೆ ಹೇಳುವುದು.
- ಬಳಿಕ ಆ ಕಥೆಗೆ ಸಂಬಂಧಿಸಿದ ಹತ್ತು ಪ್ರಶ್ನೆಗಳನ್ನು ಕೇಳುವುದು.
- ಮಕ್ಕಳಿಗೆ ಪೇಪರ್ ಕೊಟ್ಟು ಅದರಲ್ಲಿ ಉತ್ತರಿಸಲು ಹೇಳುವುದು.
- ಕನ್ನಡ ಅಧ್ಯಾಪಕರು ಸ್ಪರ್ಧೆ ನಡೆಸುವುದು.
- ಯಾರು ಹೆಚ್ಚು ಉತ್ತರಿಸುತ್ತಾರೋ ಅವರು ಜಯಶಾಲಿಗಳಾಗುತ್ತಾರೆ.

2. <u>ಮಾತನಾಡುವಿಕೆ</u>:-

- ಒಂದು ವಿಷಯ ಕೊಟ್ಟು ಆ ವಿಷಯಕ್ಕೆ ಸಂಬಂಧಿಸಿ ಐದು ನಿಮಿಷ ಮಾತನಾಡಲು ಹೇಳುವುದು.
- ಕಥೆ ಹೇಳಲು ಹೇಳುವುದು.
- ಪದ್ಯ ಹಾಡಿಸುವುದು.

3. <u>ಓದುವಿಕೆ</u>:-

- ಅಧ್ಯಾಪಕರು ಓದುವ ಕಾರ್ಡ್ ಕೊಡುವುದು.
- ಪ್ರೊಜೆಕ್ಟರ್ ನಲ್ಲಿ ಒಂದು ವಿವರಣೆ ತೋರಿಸುವುದು.
- ಅದನ್ನು ತಪ್ಪಿಲ್ಲದೆ ಗಟ್ಟಿಯಾಗಿ ಸ್ವರ ಏರಿಳಿತಗಳೊಂದಿಗೆ ಓದಲು ಹೇಳುವುದು.
- ಚೆನ್ನಾಗಿ ತಪ್ಪಿಲ್ಲದೆ ಓದಿದ ಮಗುವಿಗೆ ಬಹುಮಾನ ನೀಡುವುದು.

4. <u>ಬರವಣಿಗೆ</u>:-

- ಪ್ರೊಜೆಕ್ಟರ್ ನಲ್ಲಿ ಕೆಲವು ಚಿತ್ರಗಳನ್ನು ತೋರಿಸುವುದು.
- ಅದನ್ನು ನಿರೀಕ್ಷಿಸಿ ಅವುಗಳ ವಿವರಣೆ ಬರೆಯಲು ಹೇಳುವುದು.
- ಪದ್ಯಕ್ಕೆ ಸಾಲು ಸೇರಿಸಲು ಹೇಳುವುದು. ಇತರ ವ್ಯವಹಾರ ರೂಪಗಳನ್ನು ರಚಿಸಲು ಹೇಳುವುದು.

<u>5. ಸ್ಪರ್ಧೆಗಳು:-</u>

- ಆಲಿಸುವಿಕೆ, ಓದುವಿಕೆ, ಬರೆಯುವಿಕೆ ಕಳೆದ ನಂತರ ಸ್ಪರ್ಧೆಗಳನ್ನು ನಡೆಸುವುದು.
- ಕನ್ನಡ ಭಾಷಾ ಅಧ್ಯಾಪಕರು ಇದರ ಜವಾಬ್ದಾರಿಯನ್ನು ವಹಿಸುವುದು.

6. <u>ಸಾಹಿತ್ಯ ಶಿಬಿರಗಳು</u>:-

- ಕಥೆ, ಕವನ, ಲೇಖನ, ಹಾಡುವಿಕೆ, ಅಭಿನಯಕ್ಕಾಗಿ ವಿಶೇಷ ಶಿಬಿರಗಳನ್ನು ನಡೆಸುವುದು.

7. <u>ಪುಸ್ತಕಗಳನ್ನು ಸಂಗ್ರಹಿಸುವುದು:-</u>

- ಕನ್ನಡ ಭಾಷಾ ಅಧ್ಯಾಪಕರ ನೇತೃತ್ವದಲ್ಲಿ ನಡೆಸುವ ಚಟುವಟಿಕೆ ಇದಾಗಿದೆ.
- ಪ್ರತಿಯೊಂದು ಮಗುವಿನಲ್ಲಿಯೂ ಕಡಿಮೆ ಎಂದರೆ ಒಂದು ಪುಸ್ತಕವನ್ನು ಶಾಲೆಗೆ ಕೊಡಲು ಹೇಳುವುದು.
- ಅದೇ ರೀತಿಯಲ್ಲಿ ಶಾಲಾ ಸಿಬ್ಬಂದಿ ವರ್ಗದವರಲ್ಲಿಯೂ ಒಂದೊಂದು ಪುಸ್ತಕ ಕೊಡಲು ಹೇಳುವುದು.
- ಬಳಿಕ ಶಾಲೆಯಿಂದ ನಿವೃತ್ತಿ ಹೊಂದಿದ ಕನ್ನಡ ಅಧ್ಯಾಪಕರಲ್ಲಿ ಅವರ ಮನೆಗೆ ಭೇಟಿ ನೀಡಿ ಪುಸ್ತಕ ತೆಗೆಯಲು, ಸಂಗ್ರಹಿಸಲು ಬೇಕಾದ ಸಹಾಯವನ್ನು ಕೇಳುವುದು.
- ಧನ ಸಹಾಯವಾದರೆ ಹಣ ಸಂಗ್ರಹಿಸಿ ಕನ್ನಡ ಅಧ್ಯಾಪಕರು /ಮುಖ್ಯೋಪಾಧ್ಯಾಯರು ಶಾಲೆಗೆ ಬೇಕಾದ ಪುಸ್ತಕಗಳನ್ನು ಆಯ್ಕೆ ಮಾಡಿ ತರುವುದು.
- ಅಗತ್ಯಬಿದ್ದಲ್ಲಿ ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರನ್ನು ಸೇರಿಸಿಕೊಳ್ಳುವುದು.
- ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರಲ್ಲಿ ಒಂದೊಂದು ಪುಸ್ತಕಗಳನ್ನು ಶಾಲೆಗೆ ಕೊಡುಗೆಯಾಗಿ ನೀಡಲು ಹೇಳುವುದು.

8.<u>ಆಸ್ವಾದನೆ:-</u>

ಹಾಡು ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಆಯ್ಕೆ ಮಾಡಿ ಇತರ ಮಕ್ಕಳ ಮುಂದೆ ಅವರ ಪ್ರತಿಭೆಯನ್ನು ಪ್ರಕಟಪಡಿಸಿ ಅವರಿಗೆ ಕೇಳಲೂ/ಹೇಳಲೂ ಅವಕಾಶ ಲಭಿಸುವಂತೆ ಎರಡು ವಾರಕ್ಕೊಮ್ಮೆ ಸಾಹಿತ್ಯ ಸಭೆ ನಡೆಸುವುದು.

**ಚಟುವಟಿಕೆ - 1**

## ಸ್ವಾರಸ್ಯ ಬರವಣಿಗೆ

ಕವಿತೆಯ ಆಸ್ವಾದನೆಯ ಪ್ರಧಾನ ಅಂಶಗಳಲ್ಲಿ ಒಂದು ಆ ಕವಿತೆಯ ಕೆಲವು ಸ್ವಾರಸ್ಯಕರವಾದ ಸಾಲುಗಳು ಪದಗಳು ಅಥವಾ ಪದಸಮೂಹಗಳಾಗಿರಬಹುದು. ಮಗು ಆಸ್ವಾದನೆ ಹಂತಕ್ಕೆ ತಲುಪಬೇಕಾದರೆ ಸ್ವಾರಸ್ಯಕರವಾದ ಇಂತಹ ಅಂಶಗಳನ್ನು ಯಶಸ್ವಿಯಾಗಿ ಲಿಖಿತ ರೂಪದಲ್ಲಿ ಪ್ರಕಟಪಡಿಸುವ ಸಾಮರ್ಥ್ಯವನ್ನು ಪ್ರೌಢಶಾಲಾ ಹಂತದಲ್ಲಿ ಗಳಿಸಬೇಕು.

ಕಾಲುವಾರ್ಷಿಕ ಮೌಲ್ಯಮಾಪನ ಪ್ರಶ್ನೆ ಪತ್ರಿಕೆಗಳ ವಿಶ್ಲೇಷಣೆಯನ್ನು ನಡೆಸಿದಾಗ ಸ್ವಾರಸ್ಯ ಬರೆಯುವ ವಿದ್ಯಾರ್ಥಿಗಳ ಸಾಮರ್ಥ್ಯ ಮಟ್ಟದಲ್ಲಿ ಕುಸಿತವಾಗಿರುವುದನ್ನು ಕಾಣಬಹುದು.

ಆದುದರಿಂದ ದೈನಂದಿನ ಪಾಠ ಯೋಜನೆಯ ಸಂದರ್ಭದಲ್ಲಿ ಅಥವಾ ವಿಶೇಷ ತರಗತಿಗಳನ್ನು ನಡೆಸಿ ಈ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಗಳಿಸುವಂತಹ ಚಟುವಟಿಕೆಗಳನ್ನು ಆಯೋಜಿಸಬೇಕು.

ಉದಾಹರಣೆಗೆ 9 ನೇ ತರಗತಿಯ 'ಸಂಜೆಮೌನ' ಎನ್ನುವ ಜಿ.ಎಸ್ ಶಿವರುದ್ರಪ್ಪನವರು ಬರೆದ ಕವನದ ಕೆಳಗಿನ ಸಾಲುಗಳ ಆಸ್ವಾದನಾ ಟಿಪ್ಪಣಿಯನ್ನು ಪ್ರಕ್ರಿಯಧಾರಿತವಾಗಿ ನಡೆಸುವುದು. ಆಸ್ವಾದನ ಟಿಪ್ಪಣಿಯ ಪ್ರಕ್ರಿಯೆಯನ್ನು ಈ ರೀತಿಯಲ್ಲೂ ನಡೆಸಬಹುದು.

**ಪ್ರಕ್ರಿಯೆ**

ಸಂಜೆ ಮೌನ ಪದ್ಯದ ಸಾಲುಗಳನ್ನು ವಿದ್ಯಾರ್ಥಿಗಳಿಗೆ ಪ್ರೊಜೆಕ್ಟೆರ್ ಮೂಲಕ ತೋರಿಸುವುದು.

> ದಟ್ಟ ಹಸುರನು ತೊಟ್ಟು ಪುಷ್ಟವಾಗಿಹ ಗುಡ್ಡ
> ಮೈಯ ಚಾಚಿಹವಿಲ್ಲಿ ಸಾಲು ಸಾಲು.
> ಹಚ್ಚಹಸುರಲ್ಲ ಇದು, ಹುಚ್ಚ ಹಸುರಿನ ಬುಗ್ಗೆ
> ಲಗ್ಗೆ ನುಗ್ಗಿ ಹುದಿಲ್ಲಿ ಎತ್ತೆತ್ತಲೂ!

ಕೊಟ್ಟ ಕವನದ ಸಾಲುಗಳನ್ನು ಮೌನವಾಗಿ ಓದಲಿ. ಕಾಡಿನಿಂದ ಕೂಡಿದ ಬೆಟ್ಟ ಗುಡ್ಡಗಳ ಸಾಲುಗಳು, ದಟ್ಟ ಮರ, ಗಿಡಗಳ, ಅರಣ್ಯಗಳನ್ನು ಪ್ರೊಜೆಕ್ಟೆರ್ ಮೂಲಕ ತೋರಿಸುವುದು. (ಕವನದ ಪಾಠ ವಿನಿಮಯ ಸಂದರ್ಭದಲ್ಲಿ ತೋರಿಸಿದ್ದರೆ ಪುನಃ ತೋರಿಸಿ ನೆನಪಿಸುವುದು.)



ಸಂಜೆ ಮೌನ
ಕವನಕ್ಕೆ ಪೂರಕ ಚಿತ್ರ

ಪ್ರಕೃತಿಯ ಈ ದೃಶ್ಯಗಳನ್ನು ವೀಕ್ಷಿಸಿ, ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಕೇಳುವುದು.



ಉದಾಹರಣೆ:ಕಾಡಿನಲ್ಲಿರುವ ಮರಗಳು ಹೇಗಿವೆ?
(ದಟ್ಟವಾಗಿ, ವಿರಳವಾಗಿ ಇತ್ಯಾದಿ)
ದೂರದಿಂದ ನಮಗೆ ಕಾಣುವ ಬಣ್ಣ ಯಾವುದು?
ಕಾಡನ್ನು ಕಂಡವರ ಅನುಭವವನ್ನು ಹೇಳುವುದು. (ಪ್ರತ್ಯೇಕವಾಗಿ ಮುಸ್ಸಂಜೆ ಹೊತ್ತು) ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆಯ ಅನಂತರ ಅವರ ಅನಿಸಿಕೆ ಮತ್ತು ಕವಿತೆಯಲ್ಲಿರುವ ಅಂಶಗಳ ಒಂದು ತುಲನೆ ಮಾಡುವಂತೆ ಸೂಚಿಸುವುದು.
ಕವಿತೆಯಲ್ಲಿರುವ ವಿಶೇಷ ಪದ, ಪದ ಸಮೂಹಗಳನ್ನು ಗುರುತಿಸಲು ಸೂಚಿಸುವುದು.
ಉದಾಹರಣೆಗೆ: ದಟ್ಟ ಹಸುರನು ತೊಟ್ಟು ಪುಷ್ಟವಾಗಿಹ ಗುಡ್ಡ ಹಚ್ಚಹಸುರಲ್ಲ ಇದು ಹುಚ್ಚ ಹಸುರಿನ ಬುಗ್ಗೆ ಗುಡ್ಡ ಪುಷ್ಟವಾದದು ಎನ್ನುವುದರ ಹಿಂದಿರುವ ಭಾವನೆಯೇನು? ಅದೇ ರೀತಿ ಹುಚ್ಚ ಹಸಿರಿನ ಬಗ್ಗೆ ಎನ್ನುವಲ್ಲಿನ ಹುಚ್ಚಹಸುರು ಎನ್ನುವ ಪ್ರಯೋಗದಲ್ಲಿನ ವಿಶೇಷತೆ ಏನು?
ಲಘು ಚರ್ಚೆ ಮಾಡುವುದು.
ಚರ್ಚೆಯ ಕ್ರೋಢೀಕರಣ

- ದಟ್ಟಹಸುರನು ತೊಟ್ಟು ಪುಷ್ಟವಾಗಿ ಗುಡ್ಡ ಎನ್ನುವ ಮೂಲಕ ನಮ್ಮ ಕಣ್ಣ ಮುಂದೆ ದೊಡ್ಡ ದೊಡ್ಡ ಗಾತ್ರದ ಮರಗಳಿಂದ ಕೂಡಿದ ನಿಬಿಡ ಅರಣ್ಯಗಳ ಬೆಟ್ಟ ಗುಡ್ಡಗಳ ದೃಶ್ಯವನ್ನು ನಮ್ಮ ಮನಃಪಟಲದ ಮುಂದೆ ತಂದು ನಿಲ್ಲಿಸುತ್ತದೆ.
- ಅದೇ ರೀತಿ ಹಚ್ಚಹಸುರಲ್ಲ ಇದು ಹುಚ್ಚ ಹಸುರಿನ ಬುಗ್ಗೆ ಎನ್ನುವಲ್ಲಿಯೂ ದೂರದಿಂದ ಕಾಡಿನ ಮೇಲ್ಮೈಯನ್ನು ಕಾಣುವಾಗ ಒಂದಿನಿತು ಎಡೆ ಇರದೆ ಹಚ್ಚಹಸುರಿನ ಕೊಡೆಯಂತೆ ಕಾಣಿಸುತ್ತದೆ ಎನ್ನುವ ಮನೋಹರವಾದ ಕಲ್ಪನೆ.

ಈ ಎಲ್ಲಾ ಅಂಶಗಳನ್ನು ಸೇರಿಸಿಕೊಂಡು ವೈಯಕ್ತಿಕವಾಗಿ ಸ್ವಾರಸ್ಯ ಬರೆಯಲು ಸೂಚಿಸುವುದು.
ಸ್ವಾರಸ್ಯ ಬರಹದ ಸೂಚಕಗಳು (ಸ್ವಾರಸ್ಯ ಬರಹದಲ್ಲಿ ಇರಬೇಕಾದ ಅಂಶಗಳನ್ನು) ಕರಿ ಹಲಗೆಯಲ್ಲಿ ಅಥವಾ ಚಾರ್ಟ್, ಪ್ರೊಜೆಕ್ಟರ್ ಮೂಲಕ ತೋರಿಸುವುದು.

ಸ್ವಾರಸ್ಯ ಬರಹದ ಸ್ವರೂಪ (ಸೂಚಕಗಳು)

- ಕವಿ, ಕವಿತೆಯ ಉಲ್ಲೇಖ.
- ಕೊಟ್ಟಿರುವ ಸಾಲಿನ ಆಶಯ.
- ವಿಶೇಷ ಪದ, ಸಾಲುಗಳನ್ನು ಉಲ್ಲೇಖಿಸುವುದು.
- ಆ ಪದ ಸಾಲುಗಳಲ್ಲಿ ಕಾಣುವ ವಿಶೇಷತೆಗಳು.
- ವಾಕ್ಯಾರ್ಥ ಸೂಚ್ಯಾರ್ಥಗಳ ಕುರಿತಾದ ವಿವರಣೆ.
- ಕೆಲವರಿಂದ ಮಂಡಿಸುವುದು.
- ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರು ಸೇರಿಸುವುದು.

ಪರಿಷ್ಕರಿಸಿ ಬರೆಯಲು ತಿಳಿಸುವುದು.
ಪರಿಷ್ಕರಿಸಿದ ಬರಹವನ್ನು ಅಧ್ಯಾಪಕರು ನೋಡಿ, ಭಾಷೆ ವ್ಯಾಕರಣ ಇತ್ಯಾದಿಗಳನ್ನು ತಿದ್ದಿ ಕೊಡುವುದು.

**ಚಟುವಟಿಕೆ- 2**

## ಸಮಾಸ ಗುರುತಿಸುವ

ತೌಳವ ನಾಡಿನ ಸೌಂದರ್ಯವನ್ನು ವರ್ಣಿಸಲು ಅದೆಷ್ಟೋ ಜಿಹ್ವೆಗಳಿದ್ದರೂ ಸಾಕಾಗಲಾರದು. ಪೂರ್ವದಲ್ಲಿ ಸಹ್ಯಾದ್ರಿಯ ಬೆಟ್ಟಗುಡ್ಡ ಸಾಲುಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ , ಉತ್ತರದಲ್ಲಿ ಕಲ್ಯಾಣಪುರ ಹೊಳೆ, ದಕ್ಷಿಣದಲ್ಲಿ ಚಂದ್ರಗಿರಿ ನದಿಯಿಂದ ಆವೃತವಾದ ತುಳುನಾಡು ಭೌಗೋಳಿಕವಾಗಿಯೇ ವೈಶಿಷ್ಟವನ್ನು ಪಡೆದುಕೊಂಡಿದೆ. ಮರ ಗಿಡ ಬಳ್ಳಿಗಳಿಂದಲೂ, ಫಲಪುಷ್ಪ ತೋಟಗಳಿಂದಲೂ ಈ ನಾಡು ಕಂಗೊಳಿಸಿವೆ. ತನಗೆ ನೀರುಣಿಸಿ ಬೆಳೆಸಿದ ಮೇಘರಾಜನ ಬರವನ್ನು ಕಂಡು ಅವನ ಬಾಯಾರಿಕೆಯನ್ನು ತಣಿಸಲೋಸುಗ ಹೊನ್ನ ಕಲಶದಲಿ ಅಮೃತವನ್ನು ನೀಡುತ್ತಿದೆಯೋ ಎಂಬಂತೆ ಆಕಾಶದೆತ್ತರಕ್ಕೆ ಬೆಳೆದು ನಿಂತ ಚೆಂದೆಂಗುಗಳ ಸಾಲುಗಳು, ಆತನ ಬರುವಿಕೆಯ ದಾರಿಯನ್ನು ಅಲಂಕರಿಸಲೋ ಎನ್ನುವಂತೆ ತಲೆಯೆತ್ತಿ ನಿಂತಿರುವ ಕಂಗುಗಳ ಪಂಕ್ತಿಗಳು ಈ ನಾಡನ್ನು ಸಂಪತ್ಭರಿತವಾಗಿಸಿದೆ. ಕೆಂದಳಿರಿನಿಂದ ಕೂಡಿದ್ದ ಮಾಮರಗಳು ಪಥಿಕರ ಮುತ್ತಿಕ್ಕಲೋ ಎಂಬಂತೆ ಬಾನೆತ್ತರಕ್ಕೆ ಬೆಳೆದು ನಿಂತ ಹೆಮ್ಮರಗಳು ಈ ನಾಡಿನ ಚೆಲುವನ್ನು ಇಮ್ಮಡಿಗೊಳಿಸಿವೆ.

ಹೀಗೆ ಲೇಖನ ಭಾಗ ಒಂದನ್ನು ವಿದ್ಯಾರ್ಥಿಗಳಿಗೆ ನೀಡಿ ಸಮಾಸ ಪದಗಳ ಗುರುತಿಸುವಂತೆ ಹೇಳುವುದು, ಗುರುತಿಸಿದ ಪದಗಳನ್ನು ವಿಗ್ರಹಿಸಿ ಅವುಗಳ ವಿಶೇಷತೆಗಳನ್ನು ಸೂಚಿಸಲು ಹೇಳುವುದು.

1. ಬೆಟ್ಟಗುಡ್ಡ
2. ಫಲ ಪುಷ್ಪ
3. ಮರ ಗಿಡ ಬಳ್ಳಿಗಳು
4. ಚೆಂದೆಂಗು
5. ಹೆಮ್ಮರ
6. ಇಮ್ಮಡಿ
7. ಕೆಂದಳಿರು

ಹೀಗೆ ಸಮಾಸ ಪದಗಳನ್ನು ಗುರುತಿಸಿ ಪಟ್ಟಿ ಮಾಡುವುದು.
ಇವುಗಳನ್ನು ನಾವು ವಿಗ್ರಹಿಸೋಣ.

ಬೆಟ್ಟವೂ ಗುಡ್ಡವೂ - ಬೆಟ್ಟಗುಡ್ಡ
ಮರವೂ ಗಿಡವೂ ಬಳ್ಳಿಯೂ - ಮರಗಿಡಬಳ್ಳಿ
ಫಲವೂ ಪುಷ್ಪವೂ - ಫಲಪುಷ್ಪ

ಈ ಮೇಲಿನ ಪದಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ನಾಮಪದ ಸೇರಿ ಒಂದೇ ಪದವಾಗಿರುವುದನ್ನು ಕಾಣುತ್ತೇವೆ. ಇದನ್ನು ದ್ವಂದ್ವ ಸಮಾಸ ಎಂದು ಕರೆಯುತ್ತೇವೆ.

ಹಿರಿದು ಮರ - ಹೆಮ್ಮರ
ಕೆಚ್ಚನೆ ತೆಂಗು - ಚೆಂದೆಂಗು
ಕೆಚ್ಚನೆ ತಳಿರು - ಕೆಂದಳಿರು

ವಿಗ್ರಹ ವಾಕ್ಯದಲ್ಲಿ ವಿದ್ಯಾರ್ಥಿಗಳು ಗುರುತಿಸಿದ ವಿಶೇಷತೆಯನ್ನು ಹೇಳುವುದು
(ಉದಾಹರಣೆಗೆ ಕೆಚ್ಚನೆ ಎನ್ನುವ ವಿಶೇಷಣ ಪದವನ್ನು ಗುರುತಿಸುವುದು.)
ಈ ರೀತಿಯಾಗಿ ಪೂರ್ವ ಪದ ವಿಶೇಷವಾಗಿ ಇದ್ದು ಉತ್ತರಪದ ವಿಶೇಷ್ಯದಿಂದ ಕೂಡಿದರೆ ಇಂತಹ ಪದಗಳನ್ನು ಕರ್ಮಧಾರೆಯ ಸಮಾಸ ಎಂದು ಹೇಳುವುದು.

ಉದಾ:

ಶಾಲೆಯಲ್ಲಿ ಇವತ್ತು ಕ್ರೀಡಾ ಕೂಟದ ಮೊದಲ ದಿನ. ಶಾಂತಿಯು ಬೆಳಗ್ಗಿನಿಂದಲೇ ತುಂಬಾ ಅವಸರದಲ್ಲಿ ಇದ್ದಳು. ತಾಯಿಯೊಂದಿಗೆ ಗಂಜಿಕಾಸಲು ಸಹಾಯ ಮಾಡಬೇಕು. ಎಂದಿಗಿಂತ ಇಮ್ಮಡಿಯಷ್ಟು ಹೆಚ್ಚು ಕೆಲಸ ಆಕೆಗಿತ್ತು. ಜತೆಗೆ ತಾನು ಭಾಗವಹಿಸಲಿರುವ ಸ್ಪರ್ಧೆಗೆ ತಯಾರಿಯನ್ನು ಮಾಡಬೇಕು. ತನ್ನ ಗೆಳತಿಯರನ್ನು ಸೇರಿಸಿಕೊಂಡು ಒಗ್ಗಟ್ಟಿನಿಂದ ಕೆಲಸ ಬೇಗ ಬೇಗ ಮುಗಿಸಿದಳು.
ಸ್ಪರ್ಧೆ ಆರಂಭವಾಯಿತು. ಶಾಂತಿಯ ಓಟವನ್ನು ನೋಡಲು ಇಕ್ಕೆಲಗಳಲ್ಲಿ ಮಕ್ಕಳು ಕಾತರದಿಂದ ಕಾಯುತ್ತಿದ್ದರು. ಪ್ರತೀ ವರ್ಷದಂತೆ ಈ ವರ್ಷವೂ ಶಾಂತಿ ಮೊದಲ ಸ್ಥಾನವನ್ನು ಪಡೆದುಕೊಂಡಳು. ಆಕೆಗೆ ಪ್ರಾಧ್ಯಾಪಕರು ಪ್ರಮಾಣಪತ್ರವನ್ನು ನೀಡಿದರು. ಅದನ್ನು ಶಾಂತಿ ಕೈಮುಗಿದು ತಲೆಬಾಗಿ ಸ್ವೀಕರಿಸಿದಳು.

ಗಂಜಿಕಾಸು - ಗಂಜಿಯನ್ನು ಕಾಯಿಸು
ಕೈಮುಗಿ - ಕೈಯನ್ನು ಮುಗಿ
ತಲೆಬಾಗು - ತಲೆಯನ್ನು ಬಾಗು

ಈ ಮೇಲಿನ ಪದಗಳಲ್ಲಿ ಪೂರ್ವಪದ ನಾಮಪದವೂ ಉತ್ತರಪದ ಕ್ರಿಯಾಪದವೂ ಆಗಿರುತ್ತದೆ. ಹೀಗಿರುವವುಗಳನ್ನು ಕ್ರಿಯಾ ಸಮಾಸ ಎಂದು ಕರೆಯುತ್ತೇವೆ. ಇಲ್ಲಿ ಉತ್ತರಪದ ಯಾವತ್ತೂ ಒಂದು ಕ್ರೀಯೆಯನ್ನು ಸೂಚಿಸುತ್ತದೆ.

ಇಮ್ಮಡಿ - ಎರಡು ಮಡಿ
ಒಗ್ಗಟ್ಟು - ಒಂದು ಕಟ್ಟು
ಇಕ್ಕೆಲ - ಎರಡು ಕೆಲ

ಈ ಮೇಲಿನ ಪದಗಳಲ್ಲಿ ಪೂರ್ವಪದ ಸಂಖ್ಯಾವಾಚಕವೂ ಉತ್ತರ ಪದ ನಾಮಪದವೂ ಆಗಿರುತ್ತದೆ. ಇವುಗಳನ್ನು ದ್ವಿಗು ಸಮಾಸ ಎಂದು ಕರೆಯುತ್ತಾರೆ. ಸಂಖ್ಯಾವಾಚಕ ಎಂದರೆ ಸಂಖ್ಯೆಯನ್ನು ಹೇಳುವ ಪದಗಳಾಗಿವೆ

ಈ ರೀತಿ ಲೇಖನದ ಭಾಗವನ್ನು ವಿದ್ಯಾರ್ಥಿಗಳಿಗೆ ನೀಡಿ ಅದನ್ನು ಸರಿಯಾಗಿ ಓದಲು ಹೇಳುವುದು. ಬಳಿಕ ಅಧ್ಯಾಪಕರು ಲೇಖನದಿಂದ ನಿರ್ದಿಷ್ಟ ಪದಗಳನ್ನು ಆರಿಸಿ ಪಟ್ಟಿ ಮಾಡುವುದು. ಆ ಪದಗಳನ್ನು ವಿಗ್ರಹಿಸಿ ವಿಶೇಷತೆಯನ್ನು ಗುರುತಿಸುವಂತೆ ಹೇಳುವುದು.

**ಚಟುವಟಿಕೆ-3**

## <u>ಸಂಧಿ</u>

9 ನೇ ತರಗತಿಯ ವಿದ್ಯಾರ್ಥಿಗಳ ಪ್ರಶ್ನೆ ಪತ್ರಿಕೆಯ ಮೌಲ್ಯಮಾಪನ ಮಾಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಸಂಧಿಗಳನ್ನು ಗುರುತಿಸುವಲ್ಲಿ ಹಿನ್ನಡೆ ಹೊಂದಿದ್ದಾರೆ. ಪದವನ್ನು ವಿಂಗಡಿಸಿ ಬರೆಯುವಲ್ಲಿ ತೊಡಕಾಗಿರುವುದು ಇಲ್ಲಿನ ಮುಖ್ಯ ಕಾರಣವಾದುದರಿಂದ ಕನ್ನಡ ಸಂಧಿಗಳನ್ನು ತಿಳಿಯುವಲ್ಲಿ ಸರಳವಾದ ಚಟುವಟಿಕೆಯ ಮೂಲಕ ನಾವು ಸಾಗೋಣ.

**ಲೋಪ ಸಂಧಿ**

ಹುಲ್ಲು+ಎಸಳು=ಹುಲ್ಲೆಸಳು
ನಾವು+ಎಲ್ಲಾ=ನಾವೆಲ್ಲ
ಮಾತು+ಇಲ್ಲ=ಮಾತಿಲ್ಲ
ಹಲ್ಲು+ಇಲ್ಲ=ಹಲ್ಲಿಲ್ಲ

| |
|---|
| ಸಂಧಿಯಾಗುವಾಗ ಸ್ವರದ ಮುಂದೆ ಸ್ವರವು ಬಂದು ಅರ್ಥವು ಕೆಡದಿದ್ದ ಪಕ್ಷದಲ್ಲಿ ಪೂರ್ವ ಪದಾಂತ್ಯ ಅಕ್ಷರದ ಸ್ವರವು ಲೋಪವಾಗುವುದು ಇದಕ್ಕೆ ಲೋಪ ಸಂಧಿ ಎಂದು ಹೆಸರು |

**ಆಗಮ ಸಂಧಿ.**

ಆಗಮ ಸಂಧಿಯಲ್ಲಿ ಎರಡು ವಿಧ,

1. "ಯ' ಕಾರಾಗಮ ಸಂಧಿ

ಉದಾ:-
ಮನೆ+ಅಲ್ಲಿ=ಮನೆಯಲ್ಲಿ
ಗಾಳಿ+ಅನ್ನು=ಗಾಳಿಯನ್ನು
ದೊರೆ+ಎಂದು=ದೊರೆಯೆಂದು
ಮಳೆ+ಇಂದ= ಮಳೆಯಿಂದ

| |
|---|
| ಎರಡು ಪದಗಳು ಸೇರಿ ಸಂಧಿಯಾಗುವ ಸಂದರ್ಭದಲ್ಲಿ ಸ್ವರದ ಮುಂದೆ ಸ್ವರ ಬಂದು ಸಂಧಿ ಕಾರ್ಯದಲ್ಲಿ ಅರ್ಥ ಕೆಡುವಂತಿದ್ದರೆ ಆ ಎರಡುಸ್ವರಗಳ ನಡುವೆ 'ಯ' ಕಾರವನ್ನೋ 'ವ' ಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ ಆಗಮ ಸಂಧಿ ಎನ್ನುವರು. |

2. "ವ' ಕಾರಾಗಮ ಸಂಧಿ

ಉದಾ:-
ಮರ+ಅನ್ನು= ಮರವನ್ನು
ಜಾಗ+ಅನ್ನು=ಜಾಗವನ್ನು
ಗುರು+ಇಗೆ=ಗುರುವಿಗೆ
ಗುರು+ಅನ್ನು=ಗುರುವನ್ನು

**ಆದೇಶ ಸಂಧಿ**

ಉದಾ:-

ಮಳೆ+ಕಾಲ =ಮಳೆಗಾಲ

ಬೆಟ್ಟ+ತಾವರೆ =ಬೆಟ್ಟದಾವರೆ

ಚಳಿ+ಕಾಲ =ಚಳಿಗಾಲ

ಕಣ್+ಪನಿ =ಕಂಬನಿ

ಎರಡು ಪದಗಳು ಸೇರಿ ಸಂಧಿ ಆಗುವಾಗ ಉತ್ತರ ಪದಾದಿಯಲ್ಲಿರುವ ಕ, ತ, ಪ ಗಳಿಗೆ ಗ, ದ, ಬ ಗಳು ಆದೇಶವಾಗುವುದನ್ನು ಆದೇಶ ಸಂಧಿಯೆನ್ನುವರು.

ಲೋಪ, ಆಗಮ, ಆದೇಶ ಸಂಧಿಗಳನ್ನು ಹಂತಹಂತವಾಗಿ ಅಧ್ಯಾಪಕರು ಉದಾಹರಣೆಗಳೊಂದಿಗೆ ವಿದ್ಯಾರ್ಥಿಗಳಿಗೆ ತಿಳಿಸುವುದು.

ಸ್ವರಾಕ್ಷರದ ಮುಂದೆ ಸ್ವರಾಕ್ಷರ ಬಂದು ಸಂಧಿಯಾದರೆ ಅದು ಸ್ವರ ಸಂಧಿ ಎನಿಸಿವುದು ಮತ್ತು ಸ್ವರಾಕ್ಷರದ ಮುಂದೆ ವ್ಯಂಜನ ಬಂದು ಸಂಧಿಯಾದರೆ ಅದು ವ್ಯಂಜನ ಸಂಧಿ ಎನಿಸುವುದು ಎಂದು ಉದಾಹರಣೆಯೊಂದಿಗೆ ಅಧ್ಯಾಪಕರು ವಿವರಿಸಿ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ ಪಡೆಯುವುದು. ಅಂತಿಮವಾಗಿ ಸಂಧಿಯ ನಿಯಮಗಳನ್ನು ತಿಳಿಸುವುದು.